

# ಸ್ವಲ್ಪ ಸಮಯದ ಉಪಾಧ್ರವ

## ಉಚ್ಚರಿಸಿದ ಪ್ರವಾದನೆ

ಕರ್ತನಾದ ಯೆಹೋವನು ನುಡಿಯುತ್ತಾನೆ: ಇಗೋ, ನನ್ನ ಬಲವುಳ್ಳ ಉಜ್ಜೀವನ ದಿನವೂ ದೇಶದ ಮೇಲೆ ಬರುವದಕ್ಕೆ ಮೊದಲು ಸಣ್ಣ ಪ್ರಮಾಣದ ಉಪಾಧ್ರವ ದೇಶವನ್ನು ಹಿಡುಯುವುದು. ಇವು ದೇಶವನ್ನು ಹಲವಾರು ರೀತಿಯಲ್ಲಿಯೂ ಹಲವಾರು ಜನರನ್ನು ಹಿಡಿಯುವಂತಾದಾಗ್ಗಿಧ್ದರು, ನನ್ನ ನಾಮವನ್ನು ಹೊಂಧ್ದಿದ ನನ್ನ ಜನರನ್ನು ಕೂಡ ಅದು ಹಿಡುಯುವುದು. ಸುವಾರ್ತೆಯನ್ನು ಸಾರುವವರು ಮಧ್ಯದಲ್ಲಿಯೂ, ಸಭೆಯನ್ನು ನಡೆಸುವವರ ಮಧ್ಯದಲ್ಲಿಯೂ ಮತ್ತು ನನ್ನ ಸೇವೆಯನ್ನು ಮಾಡುವವರ ಮಧ್ಯದಲ್ಲಿಯೂ ಅವು ಹಾರಿ ಹಿಡುಯುವುದು. ಸ್ವಲ್ಪ ಸಮಯ ಮಾತ್ರವೇ ನೇಮಕ ಮಾಡಲಾಗಿದ್ದರು, ಅವರು ತಮ್ಮ ಕೃತ್ಯಗಳನ್ನು ನಡೆಸಲು ಸಾಧ್ಯವಾಗದಂತೆ ಬಲವಾಗಿ ಕಾರ್ಯಮಾಡುವಂತೆ ತೋರುತ್ತದೆ. ಅವರು ಎದ್ದು ಬಂದರು, ಸಲಹೆಗಾರರು ಅವರಿಗೆ ಆಜ್ಞೆಯನ್ನು ಮಾಡಲು ಉದ್ದೇಶಿಸಿದ್ದಾರು, ಆಡಳಿತಗಾರರು ಇಂತಹ ಆಲೋಚನೆಯನ್ನು ತಂದುಕೊಳ್ಳಲು ಬಯಸಿದರು ಹೆದರದಿರು. ಕಾರಣ ಉಪಾಧ್ರವಾದ ಜೀವಿತಾವಧಿಯು ಬಹಳ ಚಿಕ್ಕದಾಗಿದೆ. ಶೀಘ್ರದಲ್ಲೇ ಇದು ರೂಪಾಂತರಗೊಳ್ಳುತ್ತದೆ. ರಾಷ್ಟ್ರದ ಪೊಲೀಸರು ಹಲವಾರು ಸ್ಥಳಗಳಲ್ಲಿ ಪ್ರವೇಶಿಸುವರು. ಅವರು ಆರ್ಥಿಕ ಅಪರಾಧಗಳ ಮೇರೆಗೆ–ಸೇವಕರ ವಿರುದ್ಧ ಆರೋಪಗಳನ್ನು ಹಾಕಲು ಪ್ರಯತ್ನಿಸುವರು. ಇಗೋ, ಅವರು ಸೇವಕನನ್ನು ಅವನ ಸ್ಥಾನದಿಂದ ಹೊರಹಾಕುವುದಕ್ಕೆ ಪ್ರಯತ್ನಿಸುತ್ತಾರೆ ಮತ್ತು ಅವನನ್ನು ವ್ಯತವಾಗಿ ಮಾಡುವಂತೆ ಅವನನ್ನು ಬಂಧಿಸುತ್ತಾರೆ. ಇವುಗಳೆಲ್ಲವೂ ಸಂಭವಿಸಬೇಕಾಗಿದೆ. ಉಜ್ಜೀವನಕ್ಕೆ ಮುಂಚಿತವಾಗಿ ಇವುಗಳೆಲ್ಲವೂ ಸಂಭವಿಸಬೇಕು. ಈ ಘಟನೆಗಳು ಸಂಭವಿಸಿದಾಗ, ಭಯಪಡದಿರು ಮತ್ತು ಅಡಿಪಾಯವಾಗಿ ನಿನ್ನ ಪ್ರಾರ್ಥನೆಗಳನ್ನು ಇಡಲು ಎಚ್ಚರ ವಹಿಸು. ಆವರಣದಿಂದ ಆಧ್ಯಾತ್ಮಿಕ ಖಡ್ಗವನ್ನು ತೆಗೆ ಮತ್ತು ನಿನ್ನ ಆಧ್ಯಾತ್ಮಿಕ ಯುದ್ಧವನ್ನು ಪ್ರಾರಂಭಿಸು. ಕೆಲವು ದುಷ್ಟಶಕ್ತಿಗಳು ಉಪಾಧ್ರವಾದ ಈ ಅವಧಿಯನ್ನು ಬಳಸಿಕೊಳ್ಳುವ ಉದ್ದೇಶದಿಂದ ಮತ್ತು ಕೆಲವು ಸಭೆಗಳನ್ನು ಶಾಶ್ವತವಾಗಿ ಉರುಳಿಸಲು ಮತ್ತು ಕೆಲವು ಗಾಯಗಳನ್ನೂ ಉಂಟುಮಾಡುವ ಉದ್ದೇಶವನ್ನು ಹೊಂದಿವೆ. ಈ ಸಂಕ್ಷಿಪ್ತ ಕಿರುಕುಳದ ಅವಧಿಯನ್ನು ನೀವು ವೀಕ್ಷಿಸಿದಾಗ, ನೀವು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಮತ್ತು ಈ ಸಮಯವನ್ನು ಉಪಯೋಗಿಸಿ ಕೊಂಡು ಸೈತಾನನು ಹೆಚ್ಚಾದ ಉಪದ್ರವಗಳನ್ನು ಉಂಟುಮಾಡದಂತೆ ನೀನು ಪೌಳಿಯ ಒಡಕಿನಲ್ಲಿ ನಿಂತು ಜವಾಬ್ದಾರಿಹೊಂದಿ ಪ್ರಾರ್ಥಿಸುವುದು ಅಗತ್ಯ. ಇಲ್ಲದಿದ್ದರೆ ಕುಡಲ್ಪಟ್ಟ ಈ ಅವಧಿಯೊಳಗೆ ಸೈತಾನನು ದೊಡ್ಡ ಸಂಕಷ್ಟವನ್ನು ಉಂಟುಮಾಡುತಾನೆ. ಈ ಒಂದು ಉಪಾಧ್ರವ ದಿನಗಳು ಚಿಕ್ಕದೇ ಆಯ್ಕೆ ಮಾಡಲ್ಪಟ್ಟ ನನ್ನ ಜನರ ಪ್ರಾರ್ಥನೆಯ ಮೂಲಕ ಇನ್ನುಕೆಳಗೆ ತರಲಾಗುವುದು ಎಂದು ನೆನಪಿನಲ್ಲಿಡಿ. (ಬಹಿರಂಗಪಡಿಸಿದ ದಿನ: 1.11.2014 ಬೆಂಗಳೂರು ಉಪವಾಸ ಪ್ರಾರ್ಥನೆ ಮತ್ತು 06.12.2014)

## ಪ್ರಾರ್ಥನೆಯ ಅರ್ಜಿಗಳು:

1. ಪುನರುಜ್ಜೀವನದ ಪ್ರಾರಂಭಕ್ಕೂ ಮುಂಚೆಯೇ ನಾವು ಹಲವಾರು ಸ್ಥಳಗಳಲ್ಲಿ ಉಪಾಧ್ರವಾದ ಮುನ್ನುಡಿಯನ್ನು ಈಗಾಗಲೇ ನೋಡಿದ್ದೇವೆ. ಅಂತಹ ಘಟನೆಗಳಿಗಾಗಿ ಪ್ರಾರ್ಥನೆ ಮಾಡುವುದಕ್ಕಾಗಿ ಈ ದಿನಗಳು ಇವೆ. ಇವುಗಳಿಗಾಗಿ ಪ್ರಾರ್ಥಿಸುವ ಪ್ರಾರ್ಥನೆ ಯೋಧರು ಹೆಚ್ಚಿನ ಸಂಖ್ಯೆಯಲ್ಲಿ ಎದ್ದೇಳುವಂತೆಯೂ, ಪ್ರಾರ್ಥಿಸುವವರ ಹೃದಯದಲ್ಲಿ ಇವುಗಳ ಭಾರವು ಹೆಚ್ಚುವಂತೆಯೂ ಪ್ರಾರ್ಥಿಸಿರಿ.
2. ಕರ್ತನು ಮುಂಚಿತವಾಗಿ ಹೇಳಿರುವ ಈ ಉಪಾಧ್ರವಾದ ಅಲ್ಪಾವಧಿಯು ಕೆಲವು ದಿನಗಳು ಮಾತ್ರ ಇರುವುದು, ಇವು ಸಭೆಗಳಲ್ಲಿಯೂ ಮತ್ತು ಕರ್ತನ ಸೇವೆಗಳಲ್ಲಿಯೂ ಯಾವುದೇ ಶಾಶ್ವತ ಪರಿಣಾಮ ಕಾರಣವಾಗದಂತೆ ಇವುಗಳನ್ನು ತಡೆಮಾಡಿ ಪ್ರಾರ್ಥಿಸಿರಿ.
3. ಕರ್ತನ ಸೇವಕರಿಗೂ ಮತ್ತು ಸಭೆಗಳಿಗೂ ವಿರೋಧವಾಗಿ ದುಷ್ಟ ಮನುಷ್ಯರು ಗುಂಪು ಕೂಡಿದರು. ಆಳ್ವಿಕೆ ಮಾಡುವವರು ಇವುಗಳಿಗೆ ಸಹಾಯ ಮಾಡದಂತೆಯೂ, ಕರ್ತನ ಜನರಿಗೆ ವಿರೋಧವಾಗಿ ಗುಂಪುಗೂಡುವಂತವರನ್ನು ಕರ್ತನು ಅವರ ಮಾರ್ಗಗಳನ್ನು ತಿರುಗಿಸುವಂತೆಯೂ, ಗೊಂದಲವನ್ನು ತರಲು ಉದ್ದೇಶಿಸುವವರು ಅಸಮಾಧಾನವಾಗುವಂತೆಯೂ ಪ್ರಾರ್ಥಿಸಿರಿ.
4. ಈ ಉಪಾಧ್ರವಾದ ಅಲ್ಪಾವಧಿಯನ್ನು ಉಪಯೋಗಿಸಿ ಕರ್ತನ ಜನರಿಗೆ ವಿರೋಧವಾಗಿ ನಾಶಗಳನ್ನು ಉಂಟುಮಾಡುವ ಯಾವ ನಿರಂತರವಾದ ನಿಯಮಗಳನ್ನು ಉಂಟುಮಾಡದಂತೆಯೂ, ನಾಶದ ಪ್ರಾರಂಭದಲ್ಲಿಯೇ ಕರ್ತನು ಅವುಗಳನ್ನು ಮುಗಿಸುವಂತೆ ಪ್ರಾರ್ಥಿಸಿರಿ.
5. ಕಳೆಗಳನ್ನು ಕಳೆಯು ಮತ್ತು ಪೊದೆಗಳನ್ನು ಬೇರ್ಪಡಿಸಲು ಕರ್ತನು ಒಂದು ಶುದ್ಧೀಕರಣೆಗಾಗಿ ಈ ಸಮಯವನ್ನು ಅನುಮತಿಸಿದನೆ. ಇವುಗಳಲ್ಲಿ ಕರ್ತನ ಕಾರ್ಯಗಳು ಮಾತ್ರ ಪೂರ್ಣಗೊಳ್ಳುವಂತೆಯೂ. ಇವುಗಳನ್ನು ಉಪಯೋಗಿಸಿಕೊಂಡು ಸೈತಾನನು ನಿಜವಾದ ದೇವಮಕ್ಕಳ ಕೈಗಳನ್ನು ಕಟ್ಟಲು ಪ್ರತ್ನಿಸದಂತೆಯೂ ಪ್ರಾರ್ಥಿಸಿರಿ.
6. ನಿಮ್ಮ ಸ್ಥಳಗಳಲ್ಲಿ ಇರುವ ಎಲ್ಲ ನಿಜ ಸೇವಕರು ಮತ್ತು ಸಭೆಗಳನ್ನು ತಿಳಿದು ಅವುಗಳ ಹೆಸರುಗಳನ್ನೂ ಪಟ್ಟಿ ಮಾಡಿ ಪ್ರಾರ್ಥಿಸಿರಿ. ನಿಮ್ಮ ಸಭೆಗಳನ್ನು ಕೂಡ ಬಾಧಿಸದಂತೆ ಪ್ರಾರ್ಥಿಸಿರಿ.